

بِسْمِ اللهِ الرَّحْمَنِ الرَّحِيم

# ಹಝ್ರತ್ ಮುಹಮ್ಮದ್(ಸ.ಅ)ರ ಸಹಾಬಿಗಳ ಮಹೋನ್ನತ ಸ್ಥಾನಮಾನ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 15-12-2017 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಈ ಕೆಳಗಿನ ಪವಿತ್ರ ಖುರ್‌ಆನ್ ವಚನವನ್ನು ತಿಲಾವತ್ ಮಾಡಿದರು:*

وَالسَّابِقُونَ الْأَوَّلُونَ مِنَ الْمُهَاجِرِينَ وَالْأَنصَارِ وَالَّذِينَ اتَّبَعُوهُم بِإِحْسَانٍ رَّضِيَ اللَّهُ عَنْهُمْ وَرَضُوا عَنْهُ وَأَعَدَّ لَهُمْ جَنَّاتٍ تَجْرِي تَحْتَهَا الْأَنْهَارُ خَالِدِينَ فِيهَا أَبَدًا ۚ ذَٰلِكَ الْفَوْزُ الْعَظِيمُ

**ವ ಸ್ಸಾಬಿಖೂನಲ್ ಅವ್ವಲೂನ ಮಿನಲ್ ಮುಹಾಜಿರೀನ ವಲ್ ಅನ್‌ಸಾರಿ ವಲ್ಲಝೀನ ತ್ತಬಊಹುಮ್ ಬಿಇಹ್‌ಸಾನಿನ್ ರಝಿಯಲ್ಲಾಹು ಅನ್‌ಹುಮ್ ವರಝೂ ಅನ್‌ಹು ವ ಅಅದ್ದ ಲಹುಮ್ ಜನ್ನಾತಿನ್ ತಜ್‌ರೀ ತಹ್‌ತಹಲ್ ಅನ್‌ಹಾರು ಖಾಲಿದೀನ ಫೀಹಾ ಅಬದನ್ ದ್ದಾಲಿಕಲ್ ಫೌಝುಲ್ ಅಝೀಮ್.**

ಮುಹಾಜಿರ್ ಮತ್ತು ಅನ್‌ಸಾರ್‌ಗಳ ಪೈಕಿ (ಸತ್ಯವಿಶ್ವಾಸದಲ್ಲಿ) ಮೂಚೂಣಿಯಲ್ಲಿರುವ ಮೊದಲ ವಿಶ್ವಾಸಿಗಳ ಬಗ್ಗೆ ಮತ್ತು ಸತ್ಕಾರ್ಯದಲ್ಲಿ ಅವರನ್ನು ಉತ್ತಮ ರೀತಿಯಲ್ಲಿ ಅನುಸರಿಸಿದವರ ಬಗ್ಗೆ ಅಲ್ಲಾಹನು ಸಂತೃಪ್ತನಾಗಿದ್ದಾನೆ. ಅವರು ಅವನ ಬಗ್ಗೆಯೂ ಸಂತೃಪ್ತರು. ಕೆಳಭಾಗದಲ್ಲಿ ಸರಿತ್ತುಗಳು ಹರಿಯುವ ಸ್ವರ್ಗೀಯ ತೋಟಗಳನ್ನು ಅವನು ಅವರಿಗೆ ಸಿದ್ಧಪಡಿಸಿಟ್ಟಿದ್ದಾನೆ. ಅವರು ಅಲ್ಲೇ ಸ್ಥಿರವಾಗಿ ನೆಲೆಸುವರು. ಅದೇ ಮಹಾವಿಜಯವು ಆಗಿದೆ. (9:100).

ಪವಿತ್ರ ಖುರ್‌ಆನಿನ ಈ ವಚನದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಬರ ಬಗ್ಗೆ ಪ್ರಸ್ತಾಪಿಸಲಾಗಿದೆ. ಅವರು ಮುಂಚೂಣಿಯಲ್ಲಿದ್ದವರಾಗಿದ್ದರು. ಅವರು ಆಧ್ಯಾತ್ಮಿಕ ಪದವಿಗಳಲ್ಲಿ ಎಲ್ಲರಿಗಿಂತ ಮೇಲೆ ಇದ್ದರು. ತಮ್ಮ ವಿಶ್ವಾಸದ ಉನ್ನತ ಮಟ್ಟದಲ್ಲಿ ಅಲ್ಲಾಹನ ಉಪದೇಶಗಳ ಪ್ರಕಾರ ಅನುಷ್ಠಾನ ಕರ್ಮಗಳನ್ನು ಮಾಡುವುದರಲ್ಲಿ ಉಳಿದ ಎಲ್ಲರನ್ನೂ ಹಿಂದೆ ಬಿಡುವವರಾಗಿದ್ದರು. ಎಲ್ಲರಿಗಿಂತ ಮೊದಲು ವಿಶ್ವಾಸ ಹೊಂದಿದ ಈ ಜನರು ಅನಂತರ ಬರುವವರಿಗೆ ಮಾದರಿ ಉದಾಹರಣೆಗಳನ್ನು ಬಿಟ್ಟು ಹೋದರು – ಅವರ ಉದಾಹರಣೆಗಳನ್ನು ಅನುಕರಿಸಲಿಕ್ಕೋಸ್ಕರ. ಅಲ್ಲಾಹನು ಸಹಾಬರನ್ನು ಅನಂತರ ಆಗಮಿಸುವವರಿಗೆ ಅನುಕರಣೆ ಮಾಡಲು ಅರ್ಹರಾದ ಮಾದರಿಯಾಗಿ ಮಾಡಿರುವನು. ಅಲ್ಲಾಹನು ಅವರ ವಿಶ್ವಾಸದ ಉನ್ನತ ಮಟ್ಟ ಮತ್ತು ಅನುಷ್ಠಾನ ಕರ್ಮಗಳಿಂದ ಸಂತೃಪ್ತನಾಗಿದ್ದಾನೆ ಹಾಗೂ ಅವರು ಸಹ ಅಲ್ಲಾಹನ ಸಂತೃಪ್ತಿಯನ್ನು ಗಳಿಸುವುದನ್ನು ತಮ್ಮ ಜೀವಿತದ ಉದ್ದೇಶಲಕ್ಷ್ಯವನ್ನಾಗಿ ಮಾಡಿದ್ದರು ಎಂದು ಪ್ರಕಟಪಡಿಸಿರುವನು. ಅವರು ಎಲ್ಲ ಸ್ಥಿತಿಗಳಲ್ಲೂ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವ ದಾಸರಾಗಿದ್ದರು. ಅಲ್ಲಾಹನು ಹೇಳುವುದೇನೆಂದರೆ, ಯಾರು ಅವರ ಮಾದರಿ ಪ್ರಕಾರ ವರ್ತಿಸುತ್ತಾರೋ ಸತ್ಯವಿಶ್ವಾಸ ಮತ್ತು ನಿಷ್ಠೆಯನ್ನು ಹೊಂದಿರುತ್ತಾರೋ ಸತ್ಕರ್ಮ ನಿರತರಾಗಿರುತ್ತಾರೋ ಅವರು ಅಲ್ಲಾಹನ ಪಾರಿತೋಷಿಕಗಳನ್ನು ಗಳಿಸುತ್ತಾ ಇರುವರು. ಅವರನ್ನು ಅನುಸರಿಸುವುದನ್ನು ಸನ್ಮಾರ್ಗ ಗಳಿಸುವ ಮಾರ್ಗವನ್ನಾಗಿ ಅಲ್ಲಾಹನು ಮಾಡಿರುವನು.

ಒಂದು ಹದೀಸಿನಲ್ಲಿ ಹೀಗೆ ವರದಿಯಾಗಿದೆ. ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನಾನು ನನ್ನ ಸಹಾಬರ ಭಿನ್ನಾಭಿಪ್ರಾಯಗಳ ಬಗ್ಗೆ ಅಲ್ಲಾಹನೊಂದಿಗೆ ಕೇಳಿದೆ. ಅಲ್ಲಾಹನು ನನಗೆ ವಹೀ ಮೂಲಕ ಹೀಗೆ ತಿಳಿಸಿದನು: ಓ ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ್), ನಿನ್ನ ಸಹಾಬರಿಗೆ ನನ್ನ ಬಳಿ ಎಂತಹ ಸ್ಥಾನವಿದೆ ಎಂದರೆ ಆಕಾಶದಲ್ಲಿರುವ ನಕ್ಷತ್ರಗಳ ಹಾಗೆ. ಅವುಗಳಲ್ಲಿ ಕೆಲವು ಬೇರೆ ಕೆಲವುಗಳಿಗಿಂತ ಹೆಚ್ಚು ಪ್ರಕಾಶಿಸುತ್ತವೆ. ಆದರೆ ಪ್ರತಿಯೊಂದರಲ್ಲಿ ಪ್ರಕಾಶವಿದೆ. ಆದುದರಿಂದ ಯಾರಾದರೂ ನಿನ್ನ ಸಹಾಬರಲ್ಲಿ ಯಾರನ್ನು ಅನುಸರಿಸಿದರೂ ಅವರು ನನ್ನ ದೃಷ್ಟಿಯಲ್ಲಿ ಸನ್ಮಾರ್ಗ ಗಳಿಸಿದವರಾಗಿದ್ದಾರೆ.

ಅಲ್ಲಾಹನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಬರಿಗೆ ಇಂತಹ ಸ್ಥಾನ ನೀಡಿದನು. ಅವರ ಪೈಕಿ ಪ್ರತಿಯೊಬ್ಬರು ನಮಗೆ ದಾರಿ ದೀಪವಾಗಿದ್ದಾರೆ. ಸಹಾಬರ ಸ್ಥಾನ ಮಹತ್ವ, ಅಲ್ಲಾಹನು ಅವರಿಂದ ಸಂತೃಪ್ತನೂ ಅಲ್ಲಾಹನ ಬಗ್ಗೆ ಅವರು ಸಂತೃಪ್ತರೂ ಆಗಿರುವ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: ಆದರಣೀಯರಾದ ಸಹಾಬರು ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಮಾರ್ಗದಲ್ಲಿ ಸತ್ಯಸಂಧರಾಗಿ ವರ್ತಿಸಿದರು. **ರಝಿಯಲ್ಲಾಹು ಅನ್‌ಹುಮ್ ವ ರಝೂ ಅನ್‌ಹು** ಎಂಬ ಧ್ವನಿಗಳು ಅವರಿಗೆ ಕೇಳಿಸಿದುವು. ಇದು ಸಹಾಬರಿಗೆ ಲಭಿಸಿದ ಅತ್ಯುನ್ನತ ಪದವಿಯಾಗಿದೆ. ಎಂದರೆ ಅಲ್ಲಾಹನು ಅವರಿಂದ ಸಂತೃಪ್ತನಾದನು, ಅವರು ಅಲ್ಲಾಹನ ಬಗ್ಗೆಯೂ ಸಂತೃಪ್ತರಾದರು. ಈ ಪದವಿಯ ಉನ್ನತ ಸ್ಥಾನದ ಬಗ್ಗೆ ಶಬ್ದಗಳಲ್ಲಿ ವಿವರಿಸಲು ಸಾಧ್ಯವಿಲ್ಲ. ಅಲ್ಲಾಹನ ಬಗ್ಗೆ ಸಂತೃಪ್ತನಾಗುವುದು ವ್ಯಕ್ತಿಯು ಮಾಡುವ ಕೆಲಸವಲ್ಲ. ಅದು **ತವಕ್ಕುಲ್** (ಅಲ್ಲಾಹನ ಬಗ್ಗೆ ಭರವಸೆ) **ತಬತ್ತುಲ್** (ವಿರಕ್ತಿ) **ರಿಝಾ** (ತೃಪ್ತಿ) **ತಸ್‌ಲೀಮ್** (ಶರಣಾಗತಿ) ಇವುಗಳ ಉನ್ನತ ಸ್ಥಾನವಾಗಿದೆ. ಅಲ್ಲಿಗೆ ತಲಪಿದ ಮನುಷ್ಯನಿಗೆ ತನ್ನ ಯಜಮಾನನಾದ ಅಲ್ಲಾಹನ ಬಗ್ಗೆ ಯಾವ ದೂರು ಸಹ ಇರುವುದಿಲ್ಲ. ಅಲ್ಲಾಹನು ತನ್ನ ದಾಸನ ಬಗ್ಗೆ ತೃಪ್ತನಾಗಲು ಆವಶ್ಯಕವಾದುದು ದಾಸನ ಪರಿಪೂರ್ಣ ಸತ್ಯಸಂಧತೆ ಮತ್ತು

ನಿಷ್ಠೆಯಾಗಿದೆ. ಉನ್ನತ ಮಟ್ಟದ ಪರಿಶುದ್ಧತೆ ಮತ್ತು ಪರಿಪೂರ್ಣ ಅನುಸರಣೆ ಆವಶ್ಯಕವಾಗಿದೆ. ಇದರಿಂದ ತಿಳಿಯುವುದೇನೆಂದರೆ ಸಹಾಬರು ಸೂಕ್ಷ್ಮಜ್ಞಾನ ಮತ್ತು ದೇವ ಸಾಮೀಪ್ಯದ ಎಲ್ಲ ಹಂತಗಳನ್ನೂ ದಾಟಿ ಹೋಗಿದ್ದರೆಂದು.

ಸಹಾಬರು ನಮಗೆ ಅನುಕರಣೀಯ ಮಾದರಿ ಆಗಿದ್ದಾರೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಸಹಾಬರ ಉನ್ನತ ಸ್ಥಾನದ ಬಗ್ಗೆ ಒಂದು ಸಂದರ್ಭದಲ್ಲಿ ಹೀಗೆ ಹೇಳಿದರು: ನನ್ನ ಸಹಾಬರಿಗೆ ಸಂಬಂಧಿಸಿ ಅಲ್ಲಾಹನಿಗೆ ಭಯಪಟ್ಟು ಕಾರ್ಯವೆಸಗಿರಿ. ಅವರ ತಪ್ಪು ಕಂಡುಹಿಡಿಯಲು ಪ್ರಯತ್ನಿಸಬೇಡಿರಿ. ಅವರನ್ನು ಪ್ರೀತಿಸುವವನು ನನ್ನ ಕಾರಣದಿಂದ ಅವರನ್ನು ಪ್ರೀತಿಸುವನು. ಅವರನ್ನು ದ್ವೇಷಿಸುವವನು ನನ್ನನ್ನು ದ್ವೇಷಿಸುವುದರಿಂದ ಅವರನ್ನೂ ದ್ವೇಷಿಸುವನು. ಅವರಿಗೆ ದುಃಖ ನೀಡುವವನು ವಾಸ್ತವಿಕವಾಗಿ ನನಗೆ ದುಃಖ ನೀಡುತ್ತಾನೆ. ಯಾರು ನನಗೆ ದುಃಖ ನೀಡುತ್ತಾನೋ ಅವನು ಅಲ್ಲಾಹನಿಗೆ ದುಃಖ ನೀಡುತ್ತಾನೆ. ಯಾರಾದರೂ ಅಲ್ಲಾಹನಿಗೆ ದುಃಖ ನೀಡಿದರೆ ಅಥವಾ ಅವನು ಸಿಟ್ಟಾಗುವಂತೆ ಮಾಡಿದರೆ ಅವನು ಅಲ್ಲಾಹನಿಂದ ಹಿಡಿಗೂಡಲ್ಪಡುತ್ತಾನೆ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಂದು ಸ್ಥಳದಲ್ಲಿ ಹೀಗೆ ಹೇಳಿದರು: ನನ್ನ ಸಹಾಬರನ್ನು ನಿಂದಿಸಬೇಡಿರಿ. ಅವರನ್ನು ಯಾವುದೇ ಕೃತ್ಯದ ಬಗ್ಗೆ ವಿಮರ್ಶಿಸಬೇಡಿರಿ. ನನ್ನ ಪ್ರಾಣ ಯಾರ ಕೈಯಲ್ಲಿದೆಯೋ ಆ ಅಲ್ಲಾಹನ ಹೆಸರಲ್ಲಿ ಆಣೆ ಹಾಕಿ ಹೇಳುತ್ತೇನೆ. ನೀವು ಉಹುದ್ ಪರ್ವತದಷ್ಟು ಬಂಗಾರವನ್ನು ದಾನವಾಗಿ ನೀಡಿದರೂ ನನ್ನ ಸಹಾಬರು ಒಂದು, ಎರಡು ಅಥವಾ ಅರ್ಧ ದಿರ್‌ಹಮ್ ಖರ್ಚು ಮಾಡಿದಾಗ ಅವರಿಗೆ ದೊರೆತ ಪುಣ್ಯದಷ್ಟು ನಿಮಗೆ ಪುಣ್ಯ ದೊರಕಲಾರದು.

ಸಹಾಬರು ಬಹಳ ಉನ್ನತ ಸ್ಥಾನವನ್ನು ಪಡೆದ ಮಹಾನುಭಾವರಾಗಿದ್ದು ನಮಗೆ ಮಾದರಿಯಾಗಿದ್ದಾರೆ. ಅಲ್ಲಾಹನ ಸಂಪ್ರೀತಿ ಪಡೆಯಲು ಅವರನ್ನು ಅನುಸರಿಸಿ ನಾವು ನಡೆಯಬೇಕಾಗಿದೆ. ಆದುದರಿಂದ ಯಾವುದೇ ಸಹಾಬರಿಗೆ ವಿರುದ್ಧವಾಗಿ ಮಾತನಾಡಬಾರದು. ಅವರ ಬಗ್ಗೆ ಕೆಟ್ಟದಾಗಿ ಯೋಚಿಸಬಾರದು. ನಾವು ಯೋಚಿಸುವ ಅಳತೆಗೋಲಿನಲ್ಲಿ ನಾವು ಯಾರದಾದರೂ ಸ್ಥಾನವನ್ನು ಅಳೆಯಲು ಪ್ರಯತ್ನ ಮಾಡಬಾರದು. ಹಾಗೆ ಮಾಡುವುದು ತಪ್ಪಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸಹಾಬರ ಸ್ಥಾನದ ಮಹತ್ವದ ಬಗ್ಗೆ ಹೆಚ್ಚು ವಿವರಣೆ ನೀಡುತ್ತಾ ಹೇಳಿದರು: ನ್ಯಾಯನಿಷ್ಠೆಯಿಂದ ನೋಡುವುದಾದರೆ ನಮ್ಮ ಪರಿಪೂರ್ಣ ಮಾರ್ಗದರ್ಶಕ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಬರು ಅಲ್ಲಾಹನಿಗೋಸ್ಕರ ಮತ್ತು ಸಂದೇಶವಾಹಕರಿಗೋಸ್ಕರ ಎಷ್ಟೆಲ್ಲಾ ಬಲಿದಾನಗಳನ್ನು ನೀಡಿದರು. ಅವರು ಗಡಿಪಾರು ಮಾಡಲ್ಪಟ್ಟರು, ದೌರ್ಜನ್ಯಗಳಿಗೆ ಪಾತ್ರರಾದರು, ವಿವಿಧ ರೀತಿಯ ಕಷ್ಟಗಳನ್ನು ಅನುಭವಿಸಿದರು. ಜೀವಾರ್ಪಣೆ ಸಹ ಮಾಡಿದರು. ಆದರೆ ಸತ್ಯಸಂಧತೆ ಮತ್ತು ನಿಷ್ಠೆಯಿಂದ ಮುಂದೆ ಸಾಗುತ್ತಾ ಇದ್ದರು. ಅವರನ್ನು ಇಂತಹ ಜೀವಾರ್ಪಣೆ ಮಾಡುವವರನ್ನಾಗಿ ಮಾಡಿದುದು ಏನು? ಅದು ಸತ್ಯವಾದ ದೇವ ಪ್ರೀತಿಯ ಉತ್ಸಾಹವಾಗಿತ್ತು. ಅದರ ಕಿರಣಗಳು ಅವರ ಹೃದಯಗಳಿಗೆ ಬಿದ್ದಿದ್ದುವು. ಆದುದರಿಂದ ಯಾವುದೇ ಅನ್ಯ ಪ್ರವಾದಿಯೊಂದಿಗೆ ಹೋಲಿಸಿ ನೋಡಿದರೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಪದೇಶಗಳಿಂದುಂಟಾದ ಆತ್ಮಪರಿಶುದ್ಧಿ ಸಹಾಬರನ್ನು ಎಂತಹವರನ್ನಾಗಿ ಮಾಡಿತೆಂದರೆ ಅವರು ಲೌಕಿಕತೆ ಬಗ್ಗೆ ತಿರಸ್ಕಾರ ಭಾವ ಹೊಂದಿ ಶೌರ್ಯದಿಂದ ಸತ್ಯಕ್ಕೋಸ್ಕರ ತಮ್ಮ ರಕ್ತವನ್ನು ಹರಿಸಿದರು. ಇಂತಹ ಉದಾಹರಣೆ ಬೇರೆ ಎಲ್ಲಿಯೂ ಕಾಣಿಸಲಾರದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಬರ ಮಧ್ಯೆ ಇದ್ದ ಪರಸ್ಪರ ಪ್ರೀತಿ ಮತ್ತು ಅನುರಾಗದ ಚಿತ್ರವನ್ನು ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ನೀಡಿದ್ದಾನೆ:

وَأَلَّفَ بَيْنَ قُلُوبِهِمْ ۚ لَوْ أَنفَقْتَ مَا فِي الْأَرْضِ جَمِيعًا مَّا أَلَّفْتَ بَيْنَ قُلُوبِهِمْ

**ವ ಅಲ್ಲಫಬೈನ ಖುಲೂಬಿಹಿಮ್ ಲೌಅನ್‌ಫಖ್‌ತ ಮಾಫಿಲ್ ಅರ್‌ಝಿ ಜಮೀಅನ್ ಮಾ ಅಲ್ಲಫ್‌ತ ಬೈನ ಖುಲೂಬಿಹಿಮ್.**

ಅವರ ಮಧ್ಯೆ ಪರಸ್ಪರ ಎಂತಹ ಪ್ರೀತಿ ವಾತ್ಸಲ್ಯವಿದೆ ಎಂದರೆ ಭೂಮಿಯಲ್ಲಿರುವ ಎಲ್ಲವನ್ನೂ, ಬಂಗಾರದ ಬೆಟ್ಟವನ್ನಾದರೂ ಸರಿ ನೀಡಿದರೂ ಅದು ಸ್ಥಾಪಿತವಾಗುತ್ತಿರಲಿಲ್ಲ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ. ಈಗ ಮಸೀಹ್ ಮೌಊದರ ಜಮಾಅತ್ ತಮ್ಮೊಳಗೆ ಸಹಾಬರಂತಹ ಸ್ಥಿತಿ ಉಂಟುಮಾಡಬೇಕು. ಸಹಾಬರದು ಎಂತಹ ಪರಿಶುದ್ಧ ಜಮಾಅತ್ ಆಗಿತ್ತೆಂದರೆ ಅದರ ಬಗ್ಗೆ ಪವಿತ್ರ ಖುರ್‌ಆನಿನಲ್ಲಿ ಹೊಗಳಲಾಗಿದೆ. ನೀವು ಅಂತಹ ಜನರಾಗಿದ್ದೀರಾ? ಅಲ್ಲಾಹನು ಹೇಳಿದ್ದಾನೆ, ವಾಗ್ದತ್ತ ಮಸೀಹರೊಂದಿಗೆ ಎಂತಹ ಜನರಿರುವರೆಂದರೆ ಅವರು ಸಹಾಬರಿಗೆ ಸಮಾನರಾಗುವರು ಎಂದು. ಸಹಾಬರು ಹೇಗಿದ್ದರೆಂದರೆ ಅವರು ತಮ್ಮ ಸಂಪತ್ತನ್ನು ತಮ್ಮ ದೇಶವನ್ನು ಸತ್ಯದ ಮಾರ್ಗದಲ್ಲಿ ತ್ಯಜಿಸಿದರು. ಅವರು ಎಲ್ಲವನ್ನೂ ಬಿಟ್ಟರು. ಹಝ್ರತ್ ಅಬೂಬಕ್ಕರ್ ಸಿದ್ದೀಖ್ ರಝಿಯಲ್ಲಾಹು ಅನ್‌ಹುರವರ ಬಗ್ಗೆ ಬಹುತೇಕ ಜನರು ಆಲಿಸಿರಬಹುದು. ಒಮ್ಮೆ ಅಲ್ಲಾಹನ ಮಾರ್ಗದಲ್ಲಿ ಸಂಪತ್ತನ್ನು ಕೊಡಬೇಕೆಂದು ಆಜ್ಞೆ ದೊರೆತಾಗ ಅವರು ಮನೆಯಲ್ಲಿದ್ದ ಎಲ್ಲ ಸಾಮಗ್ರಿಗಳನ್ನೂ ತಂದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೇಳಿದರು: ಮನೆಯಲ್ಲಿ ಏನು ಬಿಟ್ಟು ಬಂದಿರಿ? ಎಂದು. ಅವರು ಹೇಳಿದರು: ಅಲ್ಲಾಹನನ್ನು ಮತ್ತು ಅವರ ಸಂದೇಶವಾಹಕರನ್ನು ಮನೆಯಲ್ಲಿ ಬಿಟ್ಟು ಬಂದೆನು ಎಂದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮಕ್ಕದ ಶ್ರೀಮಂತನಾಗಿರಲಿ ಕಂಬಳಿ ಹೊದ್ದ ಬಡವನಾಗಲಿ ಅವರು ಅಲ್ಲಾಹನ ಮಾರ್ಗದಲ್ಲಿ ಶಹೀದರಾದರು. ಅವರಿಗೋಸ್ಕರ ಬರೆಯಲಾಗಿತ್ತು, ಖಡ್ಗಗಳ ಕೆಳಗೆ ಸ್ವರ್ಗವಿದೆ ಎಂದು. ಆದರೆ ನಮಗೆ ಅಂತಹ ಕಠಿಣ ಪರಿಸ್ಥಿತಿ ಇಲ್ಲ. ಏಕೆಂದರೆ ನಮ್ಮ ಬಗ್ಗೆ **ಯಝುಉಲ್ ಹರ್‌ಬ್** (ಯುದ್ಧ ಸ್ಥಗಿತಗೊಳ್ಳುವುದು) ಎಂಬ ಭವಿಷ್ಯವಾಣಿ

ಇದೆ. ಎಂದರೆ ಮಹ್‌ದಿಯ ಕಾಲದಲ್ಲಿ ಧಾರ್ಮಿಕ ಯುದ್ಧ ನಡೆಯಲಾರದು ಎಂದು.

ಸಹಾಬರು ಜೀವಿಸುತ್ತಿದ್ದ ರೀತಿಯ ಬಗ್ಗೆ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಬರು ಭೋಗಲಾಲಸಿಗಳೂ ಆಹಾರ ಪಾನೀಯ ಪ್ರಿಯರೂ ಆಗಿದ್ದುಕೊಂಡು ಅವಿಶ್ವಾಸಿಗಳ ಮೇಲೆ ಜಯಗಳಿಸಿದರೇ? ಅವರು ಕೇವಲ ಸುಖಸೌಕರ್ಯವನ್ನು ಇಚ್ಛಿಸುತ್ತಿದ್ದುದರಿಂದ ಅವಿಶ್ವಾಸಿಗಳ ಮೇಲೆ ಜಯಶಾಲಿಗಳಾದರೇ? ಖಂಡಿತ ಅಲ್ಲ. ಹಿಂದಿನ ಗ್ರಂಥಗಳಲ್ಲೂ ಅವರ ಬಗ್ಗೆ ಭವಿಷ್ಯ ನುಡಿಯಲಾಗಿದೆ, **ಖಾಯಿಮುಲ್ಲೈಲ್** (ರಾತ್ರಿ ಹೊತ್ತು ನಿಂತು ಪ್ರಾರ್ಥಿಸುವವರು) **ಸಾಯಿಮುನ್ನಹಾರ್** (ಹಗಲು ಹೊತ್ತು ಉಪವಾಸ ವ್ರತ ಮಾಡುವವರು) ಆಗುವರೆಂದು. ಅವರ ರಾತ್ರಿಗಳು ಅಲ್ಲಾಹನ ನಾಮಸ್ಮರಣೆಯಲ್ಲಿ ವಿನಿಯೋಗಿಸಲ್ಪಡುತ್ತಿದ್ದುವು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪರಿಶುದ್ಧ ಶಕ್ತಿಯಿಂದ ಸಹಾಬರಲ್ಲುಂಟಾದ ಪರಿವರ್ತನೆಗಳ ಕೆಲವು ಉದಾಹರಣೆಗಳನ್ನು ನಿಮ್ಮ ಮುಂದೆ ಇರಿಸುತ್ತೇನೆ. ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರವರ ವಿನಯದ ಒಂದು ಸಂಭವ ಹೀಗಿದೆ. ಒಬ್ಬ ವ್ಯಕ್ತಿ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರೊಂದಿಗೆ ಹೇಳಿದರು, ತಾವು ಹಝ್ರತ್ ಅಬೂಬಕರ್‌ಗಿಂತ ಉತ್ತಮರು ಎಂದು. ಅದನ್ನು ಆಲಿಸಿ ಹಝ್ರತ್ ಉಮರ್ ಅಳುತ್ತಾ ಹೇಳಿದರು: ಹಝ್ರತ್ ಅಬೂಬಕರ್ ರವರ ಒಂದು ರಾತ್ರಿ ಮತ್ತು ಒಂದು ಹಗಲು ಉಮರ್ ಮತ್ತು ಅವನ ಮಕ್ಕಳ ಪೂರ್ಣ ಜೀವಿತ ಕಾಲಕ್ಕಿಂತ ಉತ್ತಮವಾಗಿದೆ. ನಾನು ನಿಮಗೆ ಹಝ್ರತ್ ಅಬೂಬಕರ್ ರವರ ಆ ಹಗಲು ಮತ್ತು ಆ ರಾತ್ರಿ ಬಗ್ಗೆ ತಿಳಿಸಲೇ? ಪ್ರಶ್ನೆ ಕೇಳಿದವರು ಹೌದು, ವಿವರಿಸಿರಿ ಎಂದಾಗ ಹಝ್ರತ್ ಉಮರ್ ಹೇಳಿದರು: ಅದು ಹಝ್ರತ್ ಅಬೂಬಕರ್‌ರವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹಿಜ್‌ರತ್ ಮಾಡಿದಾಗ ಅವರೊಂದಿಗಿದ್ದ ರಾತ್ರಿಯಾಗಿದೆ. ಅವರ ದಿನ ಯಾವುದೆಂದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮೃತರಾದಾಗ ಅರಬಿಗಳು ನಮಾಝ್ ಅನುಷ್ಠಿಸಲು ಮತ್ತು ಝಕಾತ್ ನೀಡಲು ನಿರಾಕರಿಸಿದರು. ಆಗ ಅವರು ನನ್ನ ಸಲಹೆಗೆ ವಿರುದ್ಧವಾಗಿ ಜಿಹಾದ್ ಮಾಡಲು ದೃಢ ನಿರ್ಧಾರ ಮಾಡಿದರು. ಅಲ್ಲಾಹನು ಅವರನ್ನು ಜಯಶಾಲಿಯನ್ನಾಗಿ ಮಾಡಿ ಅವರು ಸತ್ಯದಲ್ಲಿದ್ದರೆಂದು ಸಾಬೀತುಗೊಳಿಸಿದನು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಇನ್ನೊಬ್ಬ ಪ್ರಮುಖ ಸಹಾಬಿ ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹು ಆಗಿದ್ದರು. ಅವರು ಮೂರನೆಯ ಖಲೀಫರೂ ಆಗಿದ್ದರು. ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ ಹೇಳುತ್ತಾರೆ: ಹಝ್ರತ್ ಉಸ್ಮಾನ್ ಅತ್ಯಂತ ಹೆಚ್ಚಾಗಿ ಕರುಣೆ ತೋರುವವರಾಗಿದ್ದರು ಮತ್ತು ಎಲ್ಲರಿಗಿಂತ ಮಿಗಿಲಾಗಿ ಅಲ್ಲಾಹನಿಗೆ ಭಯಪಡುವವರೂ ಆಗಿದ್ದರು. ಮಸ್‌ಜಿದ್ ನಬವೀ ವಿಶಾಲವಾಗಿ ನಿರ್ಮಿಸುವ ವಿಷಯ ಪ್ರಸ್ತಾಪಿಸಲ್ಪಟ್ಟಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು ಸುತ್ತುಮುತ್ತಲಿನ ಮನೆಗಳನ್ನು ಸೇರಿಸಬೇಕೆಂದು. ಆ ಮನೆಗಳನ್ನು ಖರೀದಿಸಬೇಕಾಗಿತ್ತು. ಆಗ ಹಝ್ರತ್ ಉಸ್ಮಾನ್ ತಕ್ಷಣ ಹೇಳಿದರು: ನಾನು ಖರೀದಿಸುತ್ತೇನೆಂದು. ಅವರು ಹದಿನೈದು ಸಾವಿರ ದಿರ್‌ಹಮ್ ನೀಡಿ ಆ ಸ್ಥಳವನ್ನು ಖರೀದಿಸಿದರು. ಒಮ್ಮೆ ಮುಸ್ಲಿಮರಿಗೆ ನೀರು ದೊರೆಯಲು ಕಷ್ಟವಾಯಿತು. ಒಬ್ಬ ಯಹೂದಿಯ ಬಾವಿಯಿಂದ ನೀರನ್ನು ಕಷ್ಟಪಟ್ಟು ಪಡೆಯಬೇಕಾಗಿತ್ತು. ಹಝ್ರತ್ ಉಸ್ಮಾನ್ ಆ ಯಹೂದಿಗೆ ಆತನು ಆವಶ್ಯಪಟ್ಟ ಹಣವನ್ನು ನೀಡಿ ಆ ಬಾವಿಯನ್ನು ಖರೀದಿಸಿ ಮುಸ್ಲಿಮರಿಗೆ ನೀರಿನ ಸರಬರಾಜು ವ್ಯವಸ್ಥೆ ಮಾಡಿದರು.

ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರವರ ಸ್ವಭಾವ ಗುಣಗಳನ್ನು ವಿವರಿಸಲು ಅಮೀರ್ ಮುಆವಿಯ ಓರ್ವ ಸಹಾಬಿಯೊಂದಿಗೆ ಹೇಳಿದಾಗ, ಆ ವ್ಯಕ್ತಿ ಹೇಳಿದರು: ಹಝ್ರತ್ ಅಲಿ ಉನ್ನತ ಧೈರ್ಯಶಾಲಿಯಾಗಿದ್ದರು. ಬಲಿಷ್ಠರೂ ಶಕ್ತಿವಂತರೂ ಆಗಿದ್ದರು. ಅವರು ನ್ಯಾಯಬದ್ಧವಾಗಿ ದೃಢ ನಿರ್ಧಾರಮಾಡಿ ತೀರ್ಪು ನೀಡುತ್ತಿದ್ದರು. ಅವರಿಂದ ಜ್ಞಾನದ ಒರತೆ ಹರಿಯುತ್ತಿತ್ತು. ಅವರ ಎಲ್ಲಾ ಕಡೆಗಳಿಂದ ಸುಜ್ಞಾನ ತೊಟ್ಟಿಕ್ಕುತ್ತಿತ್ತು. ಲೋಕದ ಮತ್ತು ಅದರ ಆಕರ್ಷಣೆಗಳ ಬಗ್ಗೆ ಹೆದರುತ್ತಿದ್ದರು. ರಾತ್ರಿ ಮತ್ತು ಅದರ ಏಕಾಂತತೆಯನ್ನು ಪ್ರೀತಿಸುತ್ತಿದ್ದರು. ಬಹಳ ಅಳುವವರೂ ದೀರ್ಘವಾಗಿ ಚಿಂತಿಸುವವರೂ ಆಗಿದ್ದರು. ಅವರು ನಮ್ಮೊಂದಿಗೆ ನಮ್ಮ ಹಾಗೆ ಬಹಳ ಸರಳವಾಗಿ ಜೀವಿಸುತ್ತಿದ್ದರು. ಅಲ್ಲಾಹನಾಣೆ, ನಾವು ಅವರೊಂದಿಗೆ ಪ್ರೀತಿಯನ್ನೂ ಸಾಮೀಪ್ಯವನ್ನೂ ಹೊಂದಿದ್ದರೂ ಅವರ ಗಂಭೀರ ಪ್ರಕೃತಿಯ ಕಾರಣ ಅವರೊಂದಿಗೆ ಮಾತನಾಡಲು ಸಂಕೋಚ ಪಡುತ್ತಿದ್ದೆವು. ಅವರು ಧರ್ಮನಿಷ್ಠರಿಗೆ ಗೌರವ ನೀಡುತ್ತಿದ್ದರು. ಬಡವರಿಗೆ ತಮ್ಮ ಹತ್ತಿರ ಸ್ಥಳ ನೀಡುತ್ತಿದ್ದರು. ಶಕ್ತಿಶಾಲಿಯಾದವನಿಗೂ ಅವನ ತಪ್ಪಾದ ನಿಲುವಿಗೆ ಬೆಂಬಲ ನೀಡುತ್ತಿರಲಿಲ್ಲ. ಇದನ್ನು ಕೇಳಿ ಅಮೀರ್ ಮುಆವಿಯ ನೀವು ಹೇಳಿದುದು ಸತ್ಯ ಎಂದು ಹೇಳಿ ಅತ್ತುಬಿಟ್ಟರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮತ್ತು ಅವರ ಸಹಾಬ ರಝಿಯಲ್ಲಾಹು ಅನ್‌ಹುಮ್‌ರವರ ಕಾಲಘಟ್ಟವನ್ನು ನೋಡುವುದಾದರೆ ಅವರು ಬಹಳ ಸರಳ ಸ್ವಭಾವದವರಾಗಿದ್ದರೆಂದು ತಿಳಿಯುತ್ತದೆ. ಒಂದು ಪಾತ್ರೆಗೆ ಕಳಾಯಿ ಹಾಕಿದಾಗ ಅದು ಸ್ವಚ್ಛವಾಗುವ ಹಾಗೆ ಆ ಜನರ ಹೃದಯಗಳಿದ್ದುವು. ಅವು ಅಲ್ಲಾಹನ ವಚನಗಳಿಂದ ಪ್ರಕಾಶಿಸುತ್ತಿದ್ದುವು. ಅವು ಇಂದ್ರಿಯಾಸಕ್ತಿ ಎಂಬ ಕೊಳೆಯಿಂದ ಸಂಪೂರ್ಣವಾಗಿ ಮುಕ್ತವಾಗಿದ್ದುವು. ಅವರು **ಖದ್ ಅಫ್ಲಹ ಮನ್ ತಝಕ್ಕಾ** ಯಾರು ಪರಿಶುದ್ಧನಾಗುತ್ತಾನೋ ಅವನು ಜಯ ಹೊಂದುವನು (87:15) ಎಂಬ ಪವಿತ್ರ ಖುರ್‌ಆನ್ ವಚನವನ್ನು ಸತ್ಯವಾಗಿ ಪ್ರಕಟಿಸುವವರಾಗಿದ್ದರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮನುಷ್ಯನು ಈ ರೀತಿ ಪರಿಶುದ್ಧನಾಗಿ ಕಳಾಯಿ ಹಾಕಿದ ಪಾತ್ರೆಯ ಹಾಗೆ ತನ್ನನ್ನು ಹೊಳೆಯುವಂತೆ ಮಾಡಿದರೆ ಅಲ್ಲಾಹನ ಅನುಗ್ರಹಗಳೆಂಬ ಆಹಾರ ಅದರಲ್ಲಿ ಹಾಕಲ್ಪಡುತ್ತದೆ. ಆದರೆ ಈಗ **ಖದ್ ಅಫಲಹ ಮನ್ ತಝುಕ್ಕಾ** ಎಂಬ ಪವಿತ್ರ ಖುರ್‌ಆನ್ ವಚನಕ್ಕೆ ಅನುಸಾರವಾಗಿ ಇರುವವರು ಎಷ್ಟು ಜನರಿದ್ದಾರೆ?

ಒಟ್ಟಿನಲ್ಲಿ, ನಾವು ನಮ್ಮನ್ನು ಸುಧಾರಣೆ ಮಾಡಲು ಪ್ರಯತ್ನಿಸಬೇಕಾದುದು ಆವಶ್ಯಕವಾಗಿದೆ. ನಮ್ಮ ಪಾತ್ರೆಗಳನ್ನು ಸ್ವಚ್ಛಗೊಳಿಸಬೇಕಾಗಿದೆ. ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿದ್ದೇವೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧನಾದ ಪ್ರೇಮಿಯನ್ನು ಈ ಕಾಲಘಟ್ಟದಲ್ಲಿ ನಂಬಿದ್ದೇವೆ. ಆದುದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ವಿವರಿಸಿದ ಎಲ್ಲಾ ವಿಷಯಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನಿಸುವುದು ಸಹ ಆವಶ್ಯಕವಾಗಿದೆ. ಹಾಗೆ ಮಾಡಿದರೆ ಮಾತ್ರ ನಾವು ನೈಜ ಮುಸ್ಲಿಮರಾಗುವೆವು. ಅಲ್ಲಾಹನು ನಮಗೆ ನೈಜ ಮುಸ್ಲಿಮರಾಗುವ ಭಾಗ್ಯ ದಯಪಾಲಿಸಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. on 15-12-2017.*

**Summarized by** *Majlis Ansarullah Bharat*

***Kannada Translation**:* M. Ubeidullah for Kannada Desk, Qadian

***Reviewed by**:* M.P Ibrahim | ***Typing**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email*:** *khutuba.kannada@gmail.com*

**You can find all the Sermons archived at**: www.alislam.org/friday-sermon